ಸಾಕ್ಷಿಯನ್ನು ದಿಃ 05-11-2024 ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

<u>ಪಾಟೀ ಸವಾಲುಃ </u> ಶ್ರೀ ಪಿ.ಎಮ್.ಎನ್. 1 ನೇ ಎದುರುದಾರರ ಪರ ವಕೀಲರಿಂದ

ನಾನು 9 ನೇ ತರಗತಿಯವರೆಗೆ ವ್ಯಾಸಂಗ ಮಾಡಿರುತ್ತೇನೆ. ನನ್ನ ಗಂಡ ಶಾಲೆಗೆ ಹೋಗಿರುವುದಿಲ್ಲ. ನನ್ನ ಗಂಡ ಸಹಿ ರೂಪದಲ್ಲಿ ಹೆಬ್ಬೆಟ್ಟನ್ನು ಹಾಕುತ್ತಿದ್ದರು. ಅಪಘಾತವಾದಾಗ ನನ್ನ ಗಂಡನಿಗೆ 40 ವರ್ಷ ವಯಸ್ಸಾಗಿತ್ತೇಂದು ಸಾಬೀತು ಪಡಿಸುವಂತಹ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ನನ್ನ ಗಂಡ ದುರ್ಗಾ ಹೊಟೇಲ , ಶಿಲ್ಪಾ ಹೋಟೇಲ್, ಧಾರವಾಡ ಡಾಭಾ ಜೈ ಭವಾನಿ ಹೋಟೆಲ್‌ಗಳಲ್ಲಿ ರೊಟ್ಟಿಗಳನ್ನು ಮಾರಾಟ ಮಾಡುತ್ತಿದ್ದರು. ಅವರ ಬಳಿ ನನ್ನ ಗಂಡ ರೊಟ್ಟಿ ಮಾರಾಟ ಮಾಡುತ್ತಿದ್ದ ಬಗ್ಗೆ ದಾಖಲೆಗಳನ್ನು ಪಡೆದುಕೊಂಡಿರುವುದಿಲ್ಲ. ಸದರಿ ದಾಖಲೆಗಳನ್ನು ಪಡೆದುಕೊಂಡು ನ್ಯಾಯಾಲಯಕ್ಕೆ ಹಾಜರು ಪಡಿಸಲು ಯಾವುದೇ ಅಡಚಣೆ ಇರುವುದಿಲ್ಲ. ನಾನು ಅಪಘಾತವನ್ನು ಕಣ್ಣಾರೇ ಕಂಡಿರುವುದಿಲ್ಲ. ಅಪಘಾತವು ನನ್ನ ಗಂಡನ ತಪ್ಪಿ ನಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ಅಪಘಾತವು ನನ್ನ ಗಂಡನ ಅಜಾಗೂರುಕತೆ, ನಿರ್ಲಕ್ಷ್ಯತನದ ಚಾಲನೆಯಿಂದ ಆಗಿರುತ್ತದೆ ಎಂದರೆ ಸರಿಯಲ್ಲ. ನನ್ನ ಗಂಡನಿಗೆ ಮಾಸಿಕ 20,000/- ರೂ. ಆದಾಯ ಇತ್ತು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆಂದರೆ ಸರಿಯಲ್ಲ. ನನಗೆ ಪರಿಹಾರ ಧನವನ್ನು ನೀಡಲು ಎದುರುದಾರರು ಬಾಧ್ಯಸ್ತರಾಗಿರುತ್ತಾರೆ ಎಂಬ ಸಂಗತಿ ಸುಳ್ಳು ಇರುತ್ತದೆ ಎಂದರೆ ಸರಿಯಲ್ಲ.

2.ಅಪಘಾತದ ದಿನದಂದು ಲಾರಿಗೆ 2 ನೇ ಎದುರುದಾರರ ವಿಮೆ ಹೊಂದಿದ್ದರು ಎಂದರೆ ಸರಿ. ಆದ್ದರಿಂದ ಅವರೇ ಪರಿಹಾರ ಧನವನ್ನು ನೀಡಲು ಬಾಧ್ಯಸ್ತರು ಇರುತ್ತಾರೆಂದರೆ ಸರಿಯಲ್ಲ. ಲಾರಿಯು ಯಾವುದೇ ತಾಂತ್ರಿಕ ದೋಷಕ್ಕೆ ಒಳಪಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ಓಡಿಸುತ್ತಿದ್ದ ವಾಹನದ ಮಾಲಕರನ್ನು ಮತ್ತು ವಿಮಾ ಕಂಪನಿಯನ್ನು ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. 1 ನೇ ಎದುರುದಾರರರಿಗೆ ಯಾವುದೇ ರೀತಿಯ ಸಂಬಂಧ ಇಲ್ಲದಿದ್ದರು ಅವರ ವಿರುದ್ಧ ಸುಳ್ಳು ಅರ್ಜಿಯನ್ನು ಸಲ್ಲಿಸಿರುತ್ತೇನೆಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ಈ ಹಂತದಲ್ಲಿ 2 ನೇ ಎದುರುದಾರರ ಪರ ವಕೀಲರು ಗೈರು ಹಾಜರಾದ ಕಾರಣ ಪಾಟೀ ಸವಾಲು ಮುಂದೂಡಲಾಯಿತು.)**

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓದಿ ಹೇ ಕೇ ಸರಿ ಅದೆ.

ಹಿರಿಯ ದಿವಾಣಿ ನ್ಯಾಯಾಧೀಶರು

ಸಾಕ್ಷಿದಾರರ ಸಹಿಃ

ಹಾಗೂ ಪ್ರ.ದ.ನ್ಯಾದಂ. ಲಕ್ಷ್ಮೇಶ್ವರ